4. ಶೇ 10ರಷ್ಟು ಮೀಸಲಾತಿಯನ್ನು ಆರ್ಥಿಕವಾಗಿ ಜನಾಂಗದವರಿಗೆ ಅವರ ಇರುವಿಕೆಯನ್ನಾಧರಿಸಿ ನೀಡಲಾಗುವುದು.

ಅ) i) ಇಲ್ಲ.

ii. ಆದರೆ, ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 4 (3)ರ ಪ್ರಕಾರ ಮಂಡಳಿಯು ವಿಶೇಷವಾಗಿ ಕೋಟಾದಲ್ಲಿ ಮನೆ - ನಿವೇಶನ ಹಂಚಿಕೆ ಮಾಡುವಾಗ ಅರ್ಜಿದಾರರು ರಾಜ್ಯದ ಅಧಿಕೃತ ನಿವಾಸಿಗಳಾಗಿರುವುದು ಕಡ್ಡಾಯವಾಗಿರುವುದಿಲ್ಲ.

ಇ) i) ಇಲ್ಲ.
ii) ಇಲ್ಲ.

ರೇಷ್ಮೆ ರೀಲಿಂಗ್ ಸೆಂಟರ್ಸ್ ಸಂಖ್ಯೆ

1124 (1971): ಶ್ರೀ ಸಾದತ್ ಅಲಿಯಾನ್ (ಚನ್ನಪಟ್ಟಣ):

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ರೇಷ್ಮೆ ನೂಲು ಬಿಚ್ಚಾಣಿಕೆ ಕೇಂದ್ರಗಳೆಷ್ಟು ? ಅವುಗಳಲ್ಲಿ ಲಾಭ ಗಳಿಸುತ್ತಿರುವ ಮತ್ತು ನಷ್ಟಗೊಳಗಾಗುತ್ತಿರುವ ಕೇಂದ್ರಗಳೆಷ್ಟು ? ಮತ್ತು ಅವುಗಳ ಪೂರ್ತ;

ಆ) ಹೊಸದಾಗಿ ರೇಷ್ಮೆ ನೂಲು ಬಿಚ್ಚುವ ಘಟಕವನ್ನು ಪ್ರಾರಂಭಿಸಲು ಬೇಕಾಗುವ ಉಪಕರಣಗಳು ಯಾವುವು ? ಹೊಸ ರೇಷ್ಮೆ ನೂಲು ಬಿಚ್ಚುವ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ರಾಜ್ಯ ಸರ್ಕಾರದ ಯೋಜನೆಗಳು ಏನಾದರೂ ಇವೆಯೇ;

ಇ) ಹಾಗಿದ್ದಲ್ಲಿ ಯಾವ ಸ್ಥಳಗಳಲ್ಲಿ ಹೊಸ ರೇಷ್ಮೆ ನೂಲು ಬಿಚ್ಚುವ ಕೇಂದ್ರಗಳನ್ನು ಸ್ಥಾಪಿಸಲಾಗುವುದು ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು): -

ಅ) ಇಲಾಖೆ ವ್ಯಾಪ್ತಿಯಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ಕಾರ್ಖಾನೆಗಳು 5
ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದಡಿಯಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ಕಾರ್ಖಾನೆಗಳು 2

ಒಟ್ಟು 7

ಎಲ್ಲವೂ ನಷ್ಟದಲ್ಲಿವೆ. ಅವುಗಳ ಪೂರ್ತ ಈ ಕೆಳಕಂಡಂತೆ ಇರುತ್ತವೆ.

1. ಸರ್ಕಾರಿ ರೇಷ್ಮೆ ಕಾರ್ಖಾನೆ, ಕೊಳ್ಳೇಗಾಲ	ರೂ. 90.66 ಲಕ್ಷ
2. ಸ.ರೇ.ಕಾ. ಸಂತೇಮಾರನಹಳ್ಳಿ	ರೂ. 60.71 "
3. " ಮಾಂಬಳ್ಳಿ	ರೂ. 36.91 "
4 " ಚಾಮರಾಜ ನಗರ	ರೂ. 37.40 "
5 ಸರ್ಕಾರಿ ರೇಷ್ಮೆ ಕರಡು ಘಟಕ	ರೂ. 27.00
6 ರೇಷ್ಮೆ ನೂಲು ಬಿಚ್ಚಾಣಿಕೆ ಕಾರ್ಖಾನೆ ಟಿ. ನರಸೀಪುರ	

ಡಿಸೆಂಬರ್ 92ರ ಅಂತ್ಯದವರೆಗೆ ರೂ. 127.18
7. ಕನಕಪುರ ರೂ. 75.67

ಅ) ಹೊಸದಾಗಿ ರೇಷ್ಮೆ ನೂಲು ಬಿಚ್ಚುವ ಉದ್ಯಮ ಸ್ಥಾಪಿಸಲು ಕೆಳಕಂಡ ಉಪಕರಣಗಳ ಅಗತ್ಯವಿರುತ್ತದೆ.

ನೂಲು ಬಿಚ್ಚಾಣಿಕೆ ಯಂತ್ರಗಳು.
ಆ) ಬೇಸಿನ್‌ಗಳು
ಇ) ರೀ ರೀಲಿಂಗ್ ಯಂತ್ರಗಳು
ಇ) ಉಜ್ಜಿ ಕೊಡುವ ಅಥವಾ ಒಣ ಹವೆ ಕೊಡುವ ಯಂತ್ರ
ಈ) ರೇಷ್ಮೆಯನ್ನು ಸ್ವಚ್ಛ ಮಾಡಿ ಲಡಿ ಮಾಡುವ ಮತ್ತು ಬುಕ್ ಮಾಡುವ ಉಪಕರಣಗಳು.

ಹೊಸ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಗಳಿವೆ.

ಇ) ಹೊಸದಾಗಿ ಸರ್ಕಾರಿ ವತಿಯಿಂದ ಒಂದು ಘಟಕವನ್ನು ಬೆಳಗಾಂನಲ್ಲಿ ಮತ್ತೊಂದು ಘಟಕವನ್ನು ಹಾಸನದಲ್ಲಿ ಸ್ಥಾಪಿಸುವ ಕಾರ್ಯಕ್ರಮವಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ

1127 (1831): ಶ್ರೀ ಮನೋಹರ ಯು.ಐನಾಪುರ (ಬಳ್ಳೊಳ್ಳಿ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1993–94ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ – ಮತ್ತು ಪರಿಶಿಷ್ಟ ವರ್ಗದವರಿಗಾಗಿ ಪ್ರಾರಂಭಿಸಲಾಗುವ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ;

ಆ) ಜನಸಂಖ್ಯೆಯ ಆಧಾರದ ಮೇಲೆ ಮೀಸಲು ಕ್ಷೇತ್ರಕ್ಕೆ ಆದ್ಯತೆ ನೀಡಲಾಗುವುದೇ ?

ಇ) ಇಂಡಿ ತಾಲ್ಲೂಕಿನ ಜಿಗಜೀವಣಗಿ ತಾಂಡಕ್ಕೆ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗುವುದೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) 85

ಆ) ಅವಶ್ಯಕತೆಯನ್ನು ಆಧರಿಸಿ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗುತ್ತದೆ.

ಇ) ಜಿಲ್ಲಾ ಪರಿಷತ್ತಿನ ವತಿಯಿಂದ ಸೂಕ್ತ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಹುದ್ದೆಗಳು

1129 (1829): ಶ್ರೀ ಮನೋಹರ ಯು. ಐನಾಪುರ (ಬಳ್ಳೊಳ್ಳಿ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಇರುವ ಜಿಲ್ಲಾ ವ್ಯವಸ್ಥಾಪಕರ ಹುದ್ದೆಗಳೆಷ್ಟು;